ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
Central College Campus, Dr. Ambedkar Veedhi, Bengaluru – 560 001.
Ph.No. 080- 22961016/22131385 E-mail- registrarbcu@gmail.com

**No. BCU/Affln/ /2022-23** **Date: 27/04/2022**

## NOTIFICATION

Sub: Inviting applications for continuation of affiliation/starting of new college/new courses, permanent affiliation etc. for the academic year 2022-23.

Ref: 1. Govt. Order No. ED 34 EGOV 2020 (Part-2), dated 26-04-2022.
2. Vice-Chancellor's approval dated: 27.4.2022

Bengaluru City University, invites applications through On-line, for opening of new college, continuation of affiliation for existing colleges, permanent affiliation / additional subjects/ increase of intake/ change of name/ address/ closure of college / course/ transfer of management etc, for the academic year 2022-23. The colleges/Society/Trust under the jurisdiction Legislative Assembly Constituencies of Shantinagar, Byatarayanapura, Yelahanka, Malleswaram, Hebbal, Shivajinagar, Gandhinagar, Chamarajpet, Chickpet, Basavanagudi, B.T.M. Layout, Jayanagar and Rajajinagar of Bengaluru District are required to apply for respective affiliation.

The Notification of Affiliation fees and other details can be seen in the University Website: www.bcu.ac.in

Online application form and related details can be accessed through the Website: https://onlineaffiliation.karnataka.gov.in/login.aspx

REGISTRAR
Registrar
Bengaluru City University
Central College Campus,
Bengaluru - 560001.

To
The Principals of Colleges affiliated to Bengaluru City University.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ **BENGALURU CITY UNIVERSITY**

**City College Campus, Dr.B.R. Ambedkar Veedhi, Bengaluru – 560 001.**
**Ph.No: 080-22961016, E-mail ID: registrarbcu@gmail.com**

No.BCU/Affln/App /2022-23 Date:29.04.2022

## NOTIFICATION

**Sub: Online application for renewal and fresh affiliation for the academic year 2022-23**

Bengaluru City University invites applications for various types of affiliation for the academic year 2022-23 as prescribed now Sections 59 and 62 of the KSU Act, 2000, from the affiliated Colleges/ Managements situated in the Bengaluru City University jurisdiction as specified in the Karnataka State Universities (Amendment) Act, 2015 i.e., Karnataka Legislative Assembly constituencies of Shanthinagar, Byatarayanapura, Yelahanka, Malleshwaram, Hebbal, Shivajinagar, Gandhinagar, Chamarajpet, Chickpet, Basavangudi, BTM Layout, Jayanagar and Rajajinagar of Bengaluru District.

### 1. RENEWAL OF AFFILIATION:

Applications are invited for renewal of affiliation to the existing courses, additional courses and enhancement of intake in the existing affiliated Colleges under the Faculties of Arts, Science, Commerce and Management and Education. The Colleges intending to apply for renewal of affiliation/ enhancement of intake to BHM, MBA, MCA should obtain prior approval of AICTE, for BASLP, MASLP or B.Sc./M.Sc.(Speech & Hearing) from Rehabilitation Council of India. For B.Ed./B.P.Ed/M.Ed. colleges from NCTE as applicable.

**NAAC Accreditation:** As per the **State Government Circular No.76 UBV 2011 Bengaluru dated 17.05.2011** the Colleges which have completed 5 years are informed to adhere to the standards circulated by NAAC compulsorily and obtain a minimum of 'C' grade. The Principals of all the colleges have to make efforts to adhere to the directions of the State Government issued from time to time. Renewal of affiliation to such colleges for the academic year 2022-23 is subject to NAAC accreditation of 'C' grade.

### 2. AFFILIATION OF ADDITIONAL COURSE:

The Colleges can apply for affiliation for starting of additional courses under the Faculties of Arts, Science, Commerce & Management and Education. Colleges should seek affiliation to only approved UG courses and subjects.

**For starting of P.G Courses:** Colleges having infrastructure facilities as per guidelines (available in the University website) for permitting postgraduate courses in affiliated colleges are eligible to apply for fresh affiliation to start P.G courses. The Govt. Colleges should have prior permission from Dept. of Collegiate Education to apply for P.G. Courses. **There is no need to submit separate application for P.G. courses.**

The college/institution shall hold undisputed ownership and possession of land free from any or all encumbrances, measuring as per the direction of Government of Karnataka vide Order No. ED 29/UNE/2021, Dated:12.02.2021 & 16.02.2021 and Govt. Order No: ED 384 UNE 2020 Dated: 18.02.2022 shall be mandatory for starting New College/Additional Courses/Subjects/Intake enhancement etc.,

| Sl.No | Location of College | Requirement of Land (Including Built up Area), in acre |
|---|---|---|
| 1 | **The Colleges located in mega cities** | **0.5 acre** |
| 2 | **Colleges located in BMRDA, city Corporations and district head quarters** | **1.0 acre** |
| 3 | **Colleges located in Municipalities or taluk head quarters** | **1.5 acres** |
| 4 | **Colleges located in any other rural areas** | **3.0 acres** |
| Note: The authentic documents/Registered sale deed and Katha extract shall be enclosed/ uploaded/uploaded. | | |

## 3. ENHANCEMENT OF INTAKE:

The Colleges can apply for enhancement of intake to the courses under the Faculties of Arts, Science, and Commerce & Management. In case of P.G. courses, colleges should note that they shall not seek enhancement of intake to P.G. course more than the intake fixed in the University P.G. Department of Studies. The requirement of land as mentioned in the Sl. No. (2) Shall apply for additional intake.

## 4. FRESH AFFILIATION TO START A NEW COLLEGE:

The Managements/Societies /Trusts registered under Societies Registration Act/Trust Act, are eligible to apply for Fresh affiliation to start new Colleges for approved courses and subjects only) within the Bengaluru City University jurisdiction. The requirement of land as mentioned in the Sl. No. (2) shall apply for Fresh affiliation to start a new college which has been posted in the University website.

## 5. PERMANENT AFFILIATION/CONTINUATION OF PERMANENT AFFILIATION (EXCLUDING P.G. COURSES):

**Permanent Affiliation:** As per Section 62 of KSU Act 2000, the colleges affiliated to Bengaluru City University continuously for a period of not less than 5 years and fulfilling the conditions of affiliation and attained the academic and the administrative standards on an average stipulated by the University from time to time shall be eligible for grant of permanent affiliation. As per G.O.No. ED 37 UBV 2007 dated: - 09.04.2007, colleges must be accredited with at least 'C' grade by NAAC.

**Renewal of permanent affiliation:** The colleges which have completed terms of Permanent Affiliation shall apply for renewal of permanent affiliation.

The colleges should submit application for Permanent affiliation/Renewal of Permanent affiliation and renewal of affiliation for the courses/subjects not covered in permanent affiliation along with the prescribed affiliation fees.

The Govt. vide Circular No. ED 227 URC 2017 dated: 07-07-2017 have specified the period of permanent affiliation as 5 years, 4 years and 3 years for the colleges which have been accredited with A, B and C grade respectively by NAAC. The colleges have to apply for renewal accordingly. after completion of specified period.

## 6. SHIFTING /CHANGE OF NAME/CHANGE OF MANAGEMENT ETC.,

Requests for Shifting of Colleges, Change of Name/Management, will be considered u/s 59(5) of the K.S.U. Act, 2000. Colleges willing to apply for the same should submit separate application, with copies of the relevant documents such as, a) Resolutions of the Governing Body/Trust of the colleges, b) Building plans c)Sale/Lease deed d) Fire safety certificate e)National Building Code (NBC) certificate, f) NOCs from other Departments, if any, etc., as required, along with prescribed fee.

**Note: (i)** Colleges/Managements should note that the permission for Change of Name/Management etc., has to be approved by the State Govt. **(ii)** The conditions of requirement Land as mentioned in Sl.No. (2) Shall apply for shifting of colleges also.

## 7. APPLICATION FEES:

a. **Renewal of affiliation (UG) and (PG) / Additional Courses / Enhancement of Intake/Shifting / Change of College name/Address/Management** — **Rs. 2,000/-**

b. **Fresh and Permanent affiliation** — **Rs. 4,000/-**

## 8. AFFILIATION/APPLICATION FEE AND SUBMISSION OF APPLICATIONS:

The affiliation fee as notified in the Notification dated: 29.04.2022(For SC/ST Colleges/Managements, affiliation fee payable is 50%, as per Government Order No. ED 21 UBV 2004 Bangalore dated:15-5-2004) has to be paid through RTGS/NEFT/ by ONLINE in the name of The Finance Officer, Bengaluru City University, Bengaluru.

After submission of online application 3 copies of the printouts along with enclosures in all respects (along with Preliminary Project Report, in case of additional PG courses, if any) are to be submitted in person, with the documents/ RTGS/NEFT/ONLINE paid receipt towards affiliation/application fee Rs, 2,000/- on or before **26-05-2022 application with (late fee of Rs.10,000/- per day will be accepted) up to 31-05-2022** (4.P.M.) at the 'Office of the Registrar (Academic Section), Bengaluru City University, Central College Campus, Bengaluru-560001

**BANK DETAILS:**

- **Bank A/c No.: 05190100016143**
- **IFSC CODE: BARB0BANGAL (The Fifth Character is Zero)**
- **Bank Name: Bank of Baroda**
- **Branch: K.G. Road, Bengaluru.**

**The schedule of date for online application is as follows:**

| | | |
|---|---|---|
| 1 | Starting date for online Application | 05.05.2022 |
| 2 | Last date for submission of online application | 25.05.2022 |
| 3 | With a panel fee Rs. 10,000/- | 31.05.2022 |
| 4 | Last date for submission of three sets of hard copies to the University along with enclosures. | 04.06.2022 |

**Note:** (I) Refund of Affiliation fee will be as per the revised Statutes pertaining to affiliation of colleges/Institutions of Bengaluru City University.

(2) Fee paid by the college for unapproved courses/subjects will not be refunded /adjusted.

(3) Colleges should mention Karnataka Legislative Assembly constituencies to which they belong in their applications with copies of relevant proof.

(4) Additional 18% of GST on Affiliation fee shall have to be paid by the colleges as and when it is made mandatory by the Government.

(5)For Further details/clarification, if any, please contact **080-22961016/ 080-22131385** during working hours.

*BY ORDER*

*REGISTRAR*

Registrar
Bengaluru City University
Central College Campus,
Bengaluru - 560001.

To,

1. The Principals of all the Colleges affiliated to Bengaluru City University.

Copy to:

1. The Principal Secretary to Government, Department of Higher Education, MS Buildings, Dr. Ambedkar Veedhi, Bengaluru – 560 001.
2. PS to Hon'ble Education Minister, Government of Karnataka, Vidhana Soudha, Bengaluru – 560 001.
3. The Commissioner / Director, Collegiate Education, Bengaluru – 560 001.
4. PS to Vice-Chancellor / Registrar / Registrar (Evaluation), Bengaluru City University.
5. The Finance Officer, Bengaluru City University, Bengaluru – 560 001.
6. The Branch Manager, Bank of Baroda, KG Road, Bengaluru – 560 009.
7. Office copy / guard file.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. Ambedkar Veedhi, Bengaluru – 560 001.
Ph.No. 080- 22961016/22131385 E-mail- registrarbcu@gmail.com

ಸಂಖ್ಯೆ: ಬಿಸಿಯು/ಸಂಯೋಜನೆ/ /2022–23 ದಿನಾಂಕ:29–04–2022

## ಅಧಿಸೂಚನೆ

ವಿಷಯ: 2022–23ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿವಿಧ ಬಗೆಯ ಸಂಯೋಜನೆ ಮುಂದುವರಿಕೆ/ ವಿದ್ಯಾರ್ಥಿ ಪ್ರಮಾಣ ಹೆಚ್ಚಳ/ಕಡಿಮೆಗೊಳಿಸುವಿಕೆ ಹೊಸ ಕೋರ್ಸ್/ ಕಾಲೇಜು ಪ್ರಾರಂಭ/ ಶಾಶ್ವತ ಸಂಯೋಜನೆ ಇತ್ಯಾದಿಗಳ ಬಗ್ಗೆ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸುವ ಬಗ್ಗೆ–

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 34 ಇಜಿಒವಿ 2020 (ಭಾಗ 2), ದಿನಾಂಕ 26–04–2022.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: ೨೯.೪.೨೦೨೨

ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ, ಅಂದರೆ ಕರ್ನಾಟಕ ವಿಧಾನ ಸಭಾ ಕ್ಷೇತ್ರಗಳಾದ ಬೆಂಗಳೂರು ಜಿಲ್ಲೆಯ **ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಮಲ್ಲೇಶ್ವರಂ, ಹೆಬ್ಬಾಳ, ಶಿವಾಜಿನಗರ, ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿ.ಟಿ.ಎಂ. ಲೇಔಟ್, ಜಯನಗರ, ರಾಜಾಜಿನಗರ** ಕ್ಷೇತ್ರಗಳಲ್ಲಿರುವ ಕಾಲೇಜು/ಆಡಳಿತ ಮಂಡಳಿಗಳಿಂದ 2022–23ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನೆಯನ್ನು ನವೀಕರಿಸಲು, ಹೆಚ್ಚುವರಿ ಕೋರ್ಸುಗಳನ್ನು / ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು, ವಿದ್ಯಾರ್ಥಿ ಪ್ರಮಾಣ ಹೆಚ್ಚಳಕ್ಕೆ / ಹೊಸ ಕಾಲೇಜುಗಳನ್ನು ಪ್ರಾರಂಭಿಸಲು, ಶಾಶ್ವತ ಸಂಯೋಜನೆಯನ್ನು ಪಡೆಯಲು, ಹೆಸರು ಬದಲಾವಣೆ / ಕಾಲೇಜುಗಳನ್ನು ಸ್ಥಳಾಂತರಿಸಲು / ಆಡಳಿತ ಬದಲಾವಣೆ ಮುಂತಾದವುಗಳಿಗೆ ರಾಷ್ಟ್ರೀಯ ಮಾಹಿತಿ ಸಂಸ್ಥೆ (NIC) ಅಭಿವೃದ್ಧಿಪಡಿಸಿರುವ ತಂತ್ರಾಂಶದ ಮುಖಾಂತರ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಂಯೋಜನೆ ಶುಲ್ಕ ಮತ್ತು ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ (website): www.bcu.ac.inನಲ್ಲಿ ಹಾಗೂ Online ಅರ್ಜಿ ನಮೂನೆ ಹಾಗೂ ಸಂಬಂಧಿಸಿದ ಮಾಹಿತಿಯನ್ನು ಜಾಲತಾಣ (website): https://onlineaffiliation.karnataka.gov.in/login.aspx ನಲ್ಲಿ ನೋಡಬಹುದು.

ಕುಲಸಚಿವರು
ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ
560

ಗೆ,
ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳು,
ಬೆಂಗಳೂರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

No. BCU/ACA/Affln/2022-23 Date: 29-04-2022

**ಅಧಿಸೂಚನೆ**

***ವಿಷಯ: 2022–23ನೇ ಶೈಕ್ಷಣಿಕ ಸಾಲಿಗಾಗಿ ಆನ್‌ಲೈನ್ ಮುಖಾಂತರ ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸುವ ಕುರಿತು:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು, 2022–23ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ, ಅಂದರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ(ತಿದ್ದುಪಡಿ) 2015ರಲ್ಲಿ ನಿಗದಿಪಡಿಸಿದಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭೆ ಕ್ಷೇತ್ರಗಳಾದ ಶಾಂತಿನಗರ, ಬ್ಯಾಟರಾಯನಪುರ, ಯಲಹಂಕ, ಮಲ್ಲೇಶ್ವರಂ, ಹೆಬ್ಬಾಳ, ಶಿವಾಜಿನಗರ, ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಬಸವನಗುಡಿ, ಬಿ.ಟಿ.ಎಂ ಲೇಔಟ್, ಜಯನಗರ ಮತ್ತು ರಾಜಾಜಿನಗರ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳಿಂದ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ–2020 (NEP)ರ ಅಡಿಯಲ್ಲಿ ಸಂಯೋಜನ ನವೀಕರಣ/ ಹೊಸ ಕೋರ್ಸು ಸಂಯೋಜನೆ /ವಿದ್ಯಾರ್ಥಿ ಪ್ರಮಾಣದ ಹೆಚ್ಚಳ/ ಶಾಶ್ವತ ಸಂಯೋಜನೆ/ ನವೀಕರಣ ಮತ್ತು ಹೊಸ ಕಾಲೇಜುಗಳ ಸಂಯೋಜನೆಗಾಗಿ ಅನ್‌ಲೈನ್ ಮುಖಾಂತರ ಅರ್ಜಿಗಳನ್ನು ಅಹ್ವಾನಿಸಿದೆ.

## 1. ಸಂಯೋಜನ ನವೀಕರಣ:

ಈಗಾಗಲೇ ಅಸ್ತಿತ್ವದಲ್ಲಿರುವ ಕಲಾ, ವಿಜ್ಞಾನ, ವಾಣಿಜ್ಯ, ನಿರ್ವಹಣೆ ಮತ್ತು ಶಿಕ್ಷಣ ವಿಷಯಗಳಲ್ಲಿ ನಡೆಸುತ್ತಿರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳ ಸಂಯೋಜನಾ ನವೀಕರಣ, ಹೆಚ್ಚುವರಿ ಕೋರ್ಸು, ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ. ಬಿ.ಹೆಚ್.ಎಂ, ಎಂ.ಬಿ.ಎ ಮತ್ತು ಎಂ.ಸಿಎ ಕೋರ್ಸುಗಳ ಸಂಯೋಜನಾ ನವೀಕರಣ/ ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಅರ್ಜಿ ಸಲ್ಲಿಸುವ ಕಾಲೇಜುಗಳು ಎ.ಐ.ಸಿ.ಟಿ.ಇ ವತಿಯಿಂದ ಪೂರ್ವಾನುಮೋದನೆ, ಬಿಎಸ್.ಎಲ್.ಪಿ/ ಎಂ.ಎಸ್.ಎಲ್.ಪಿ, ಬಿ.ಎಸ್ಸಿ/ ಎಂ.ಎಸ್ಸಿ (ಸ್ಪೀಚ್ ಅಂಡ್ ಹಿಯರಿಂಗ್) ನಡೆಸುತ್ತಿರುವ ಕಾಲೇಜುಗಳು ರೀಹಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದ ಪೂರ್ವಾನುಮೋದನೆಯನ್ನು ಬಿ.ಎ/ಬಿ.ಎಸ್ಸಿ/ಬಿ.ಇಡಿ, ಬಿ.ಇಡಿ, ಬಿ.ಪಿ.ಇಡಿ ಮತ್ತು ಎಂ.ಇಡಿ ಕೋರ್ಸುಗಳನ್ನು ನಡೆಸುತ್ತಿರುವ ಕಾಲೇಜುಗಳು ಎನ್.ಸಿ.ಟಿ.ಇ ಯಿಂದ ಪೂರ್ವಾನುಮೋದನೆಯನ್ನು ಹೊಂದಿರತಕ್ಕದ್ದು.

**ನ್ಯಾಕ್ ಮಾನ್ಯತೆ:** ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 76 ಯುಬಿವಿ 2011, ಬೆಂಗಳೂರು ದಿನಾಂಕ: 17–05–2011ರಲ್ಲಿ ತಿಳಿಸಿರುವಂತೆ ಕಾಲೇಜು ಅಸ್ತಿತ್ವಕ್ಕೆ ಬಂದು ಐದು ವರ್ಷ ಪೂರೈಸಿರುವಂತಹ ಕಾಲೇಜುಗಳು ನ್ಯಾಕ್ ಸಂಸ್ಥೆಯ ಮಾನದಂಡಗಳನ್ನು ಪೂರೈಸಿ ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯ ಮಾನ್ಯತೆಯನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಕಾಲೇಜಿನ ಪ್ರಾಂಶುಪಾಲರುಗಳು ಸರ್ಕಾರವು ಹೊರಡಿಸುವ ನಿರ್ದೇಶನಗಳಿಗೆ ಬದ್ಧರಾಗಿರತಕ್ಕದ್ದು. 2022–23ನೇ ಸಾಲಿಗೆ ಅಂತಹ ಕಾಲೇಜುಗಳ ಸಂಯೋಜನಾ ನವೀಕರಣವು ಕಾಲೇಜು ನ್ಯಾಕ್ ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯ ಮಾನ್ಯತೆಯನ್ನು ಹೊಂದುವ ಷರತ್ತಿಗೊಳಪಟ್ಟಿರುತ್ತದೆ.

ಸಂಯೋಜನಾ ನವೀಕರಣ, ಹೆಚ್ಚುವರಿ ಕೋರ್ಸು, ವಿದ್ಯಾರ್ಥಿಪ್ರಮಾಣದ ಹೆಚ್ಚಳ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನಾ ನವೀಕರಣ ಕುರಿತಂತೆ ಚೆಕ್ ಲಿಸ್ಟ್ ಮತ್ತು ಮಾರ್ಗಸೂಚಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

## 2. ಹೆಚ್ಚುವರಿ ಕೋರ್ಸು/ಹೊಸ ಕೋರ್ಸು ಸಂಯೋಜನೆ

ದಿನಾಂಕ: 30.12.2021ರ ಸಿಂಡಿಕೇಟ್ ಸಭೆಯ ತೀರ್ಮಾನದಂತೆ, ಈಗಾಗಲೇ ಅಸ್ತಿತ್ವದಲ್ಲಿರುವ ಏಕಾತ್ಮಕ (Single faculty) ಕಲಾ, ವಿಜ್ಞಾನ, ವಾಣಿಜ್ಯ, ನಿರ್ವಹಣೆ ಮತ್ತು ಶಿಕ್ಷಣ ಕಾಲೇಜುಗಳು ಹೆಚ್ಚುವರಿಯಾಗಿ ಕನಿಷ್ಠ ಇನ್ನು ಒಂದು ನಿಕಾಯದ ವ್ಯಾಸಂಗಗಳನ್ನು ಪ್ರಾರಂಭಿಸುವುದು ಕಡ್ಡಾಯವಾಗಿರುತ್ತದೆ.

ಉದಾ: ಕಲಾ ನಿಕಾಯದ ಕಾಲೇಜು – ವಾಣಿಜ್ಯ ಅಥವಾ ವಿಜ್ಞಾನ ನಿಕಾಯದ ಕೋರ್ಸುಗಳನ್ನು; ವಾಣಿಜ್ಯ ನಿಕಾಯದ ಕಾಲೇಜು –ಕಲಾ ಅಥವಾ ವಿಜ್ಞಾನ ನಿಕಾಯ ಕೋರ್ಸುಗಳನ್ನು; ವಿಜ್ಞಾನ ಕಾಲೇಜು – ಕಲಾ ಅಥವಾ ವಾಣಿಜ್ಯ ನಿಕಾಯದ ಕೋರ್ಸುಗಳನ್ನು ಪ್ರಾರಂಭಿಸುವುದು ಕಡ್ಡಾಯವಾಗಿರುತ್ತದೆ. ಅಂತಹ ಕಾಲೇಜುಗಳು ಹೆಚ್ಚುವರಿ ಕೋರ್ಸುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಬೇಕಾಗಿದೆ, ಹೆಚ್ಚುವರಿ ಕೋರ್ಸುಗಳನ್ನು ಪ್ರಾರಂಭಿಸಲು ಸಂಯೋಜನಾ ನವೀಕರಣದ ಅರ್ಜಿಯ 7ಬಿ ಕಾಲಂನಲ್ಲಿ

ನಮೂದಿಸತಕ್ಕದ್ದು. ಕಾಲೇಜುಗಳು ವಿಶ್ವವಿದ್ಯಾನಿಲಯದಿಂದ ಅನುಮೋದಿತವಾದ ಪಠ್ಯಕ್ರಮ ಹೊಂದಿದ ವಿಷಯಗಳನ್ನು ಮಾತ್ರ ಅರ್ಜಿಯಲ್ಲಿ ನಮೂದಿಸತಕ್ಕದ್ದು.

**ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಬಗ್ಗೆ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸುಗಳ ಸಂಯೋಜನಾ ಮಾರ್ಗಸೂಚಿಯನ್ವಯ (ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ) ಅರ್ಹತೆ ಉಳ್ಳ ಕಾಲೇಜುಗಳು ಸ್ನಾತಕೋತ್ತರ ಕೋರ್ಸುಗಳ ಹೊಸ ಸಂಯೋಜನೆ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಕಾಲೇಜುಗಳು ಈ ಕೋರ್ಸುಗಳನ್ನು ಸಂಯೋಜನಾ ನವೀಕರಣದ ಅರ್ಜಿಯ 7(ಬಿ) ಕಾಲಂನಲ್ಲಿ ನಮೂದಿಸತಕ್ಕದ್ದು ಮತ್ತು ಈ ಕೋರ್ಸುಗಳನ್ನು ಪ್ರಾರಂಭಿಸುವ ಬಗ್ಗೆ ಕಾಲೇಜು ಹೊಂದಿರತಕ್ಕಂತಹ ಮೂಲಭೂತ ಸೌಲಭ್ಯಗಳು, ಕೋರ್ಸುಗಳನ್ನು ನಡೆಸಲು ಹಣಕಾಸು ಮತ್ತು ಇತರೇ ಸೌಲಭ್ಯಗಳ ಬಗ್ಗೆ ಒಂದು ಪ್ರಾಥಮಿಕ ವರದಿಯನ್ನು ಸಹ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಸರ್ಕಾರಿ ಕಾಲೇಜುಗಳು ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆಗೆ ಅರ್ಜಿಸಲ್ಲಿಸಲು ಕಾಲೇಜು ಶಿಕ್ಷಣ ಇಲಾಖೆಯ ಅನುಮತಿಯನ್ನು ಪಡೆಯತಕ್ಕದ್ದು. ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಇಡಿ 384 ಯುಎನ್ಇ 2020, ದಿನಾಂಕ: 18.02.2022ರ ಪ್ರಕಾರ ಹೊಸ ಕಾಲೇಜು/ಹೊಸ ಕೋರ್ಸು/ಹೆಚ್ಚುವರಿವಿಷಯಗಳು/ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣಗಳು ಪರಿಗಣಿಸಲು ಆಯಾ ಸಂಸ್ಥೆ/ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನಿನ ಮಿತಿಯನ್ನು ಸರ್ಕಾರವು ಈ ಕೆಳಗಿನಂತೆ ಪರಿಷ್ಕರಿಸಿ, ನಮೂದಿಸಿರುವಂತೆ ಸೂಕ್ತ ಮಾನದಂಡಗಳನ್ನು ಹೊಂದಿರುವುದು ಅಗತ್ಯವಾಗಿರುತ್ತದೆ.

| | | |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯ ಪ್ರದೇಶದಲ್ಲಿ | 0.5 ಎಕರೆ ವಿಸ್ತೀರ್ಣ |
| ಆ | ಬಿ.ಎಂ.ಆರ್.ಡಿ.ಎ. /ನಗರ ಪಾಲಿಕೆ ಮತ್ತು ಜಿಲ್ಲಾಡಳಿತ ಕೇಂದ್ರ, ಸ್ಥಾನ ವ್ಯಾಪ್ತಿಯ ಪ್ರದೇಶದಲ್ಲಿ | 1.0 ಎಕರೆ ವಿಸ್ತೀರ್ಣ |
| ಇ | ನಗರಸಭೆ/ತಾಲ್ಲೂಕ್ ಕೇಂದ್ರಸ್ಥಾನ ವ್ಯಾಪ್ತಿಯ ಪ್ರದೇಶದಲ್ಲಿ | 1.5 ಎಕರೆ ವಿಸ್ತೀರ್ಣ |
| ಈ | ಬೆಂಗಳೂರು ಗ್ರಾಮೀಣ ವ್ಯಾಪ್ತಿಯ ಪ್ರದೇಶದಲ್ಲಿ | 3.0 ಎಕರೆ ವಿಸ್ತೀರ್ಣ |

ಸೂ: ಮಹಾವಿದ್ಯಾಲಯಗಳು ಮೇಲೆ ಸೂಚಿಸಿದ ವಿಸ್ತೀರ್ಣ ಜಮೀನು ಹೊಂದಿರುವ ಕುರಿತು ಭೂದಾಖಲೆಗಳನ್ನು ಒದಗಿಸತಕ್ಕದ್ದು.

**3. ವಿದ್ಯಾರ್ಥಿ ಪ್ರಮಾಣದ ಹೆಚ್ಚಳ:**

ಕಲಾ, ವಿಜ್ಞಾನ, ವಾಣಿಜ್ಯ, ನಿರ್ವಹಣೆ ಮತ್ತು ಶಿಕ್ಷಣ ಕಾಲೇಜುಗಳು ಅಸ್ತಿತ್ವದಲ್ಲಿರುವ ಕೋರ್ಸುಗಳ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಬೇಕಾದಲ್ಲಿ ಹೆಚ್ಚುವರಿ ವಿಭಾಗ ಪ್ರಾರಂಭಿಸಲು ಅರ್ಜಿ ಸಲ್ಲಿಸಬಹುದಾಗಿದೆ. ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಕಾಲೇಜುಗಳು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ನಿಗದಿಪಡಿಸಲಾಗಿರುವ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣಕ್ಕೆ ಅರ್ಜಿ ಸಲ್ಲಿಸತಕ್ಕದ್ದಲ್ಲವೆಂಬ ಅಂಶವನ್ನು ಗಮನಿಸತಕ್ಕದ್ದು. ಆ ಹೆಚ್ಚಳಕ್ಕೂ ಕ್ರ.ಸಂ. 2ರಲ್ಲಿ ನಮೂದಿಸಿರುವ ಭೂಮಿತಿ ಅನ್ವಯವಾಗುತ್ತದೆ.

**4. ಹೊಸ ಕಾಲೇಜು ಪ್ರಾರಂಭಿಸಲು ಸಂಯೋಜನೆ:**

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಘ/ ಟ್ರಸ್ಟ್ ನೊಂದಣಿ ಕಾಯಿದೆ ಅನ್ವಯ ನೊಂದಾಯಿತ ಆಡಳಿತ ಮಂಡಳಿ/ ಸೊಸೈಟಿ/ ಟ್ರಸ್ಟಗಳು ಹೊಸ ಕಾಲೇಜನ್ನು ಪ್ರಾರಂಭಿಸಲು ಕನಿಷ್ಠ ಎರಡು ನಿಕಾಯಗಳ ಅನುಮೋದಿತ ಕೋರ್ಸು/ ವಿಷಯಗಳಿಗೆ (ಕಂಡಿಕೆ 2ರಲ್ಲಿ ವಿವರಿಸಿರುವಂತೆ) ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಸೂಚನೆ: 1. ಎನ್.ಸಿ.ಟಿ.ಇ ನಿಯಮಗಳನುಸಾರ ಆಡಳಿತ ಮಂಡಳಿ/ಸೊಸೈಟಿ/ಟ್ರಸ್ಟ್‌ಗಳು ಹೊಸ ಬಿ.ಇಡಿ/ಬಿ.ಪಿ.ಇಡಿ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸತಕ್ಕದ್ದಲ್ಲ.**

**2. ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳು ಮಾತ್ರ ಸರ್ಟಿಫಿಕೇಟ್ ಕೋರ್ಸು, ಡಿಪ್ಲೊಮಾ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.** ಕ್ರ.ಸಂ. 2ರಲ್ಲಿ ನಮೂದಿಸಿರುವ ಭೂಮಿತಿ ಹಾಗೂ ಸಂಬಂಧಿಸಿದ ಪ್ರಮಾಣ ಪತ್ರಗಳು ಕಡ್ಡಾಯವಾಗಿ ಅನ್ವಯವಾಗುತ್ತದೆ.

**5. ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನಾ ನವೀಕರಣ (ಸ್ನಾತಕೋತ್ತರ ಕೋರ್ಸುಗಳನ್ನು ಹೊರತುಪಡಿಸಿದೆ)**

**ಶಾಶ್ವತ ಸಂಯೋಜನೆ:** ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 62ರ ಅಡಿಯಲ್ಲಿ, ವಿಶ್ವವಿದ್ಯಾಲಯಕ್ಕೆ 5 ವರ್ಷಕ್ಕೂ ಕಡಿಮೆ ಇಲ್ಲದ ಅವಧಿಗೆ ನಿರಂತರ ಸಂಯೋಜನಾ ನವೀಕರಣ ಹೊಂದಿದ್ದು, ಸರಾಸರಿಯಲ್ಲಿ ವಿಶ್ವವಿದ್ಯಾಲಯವು ನಿಗದಿಪಡಿಸಿರುವಂತಹ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜುಗಳು ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 37 ಯುಬಿಪಿ 2007, ದಿನಾಂಕ 09-04-2007ರಲ್ಲಿ ನಿಗದಿಪಡಿಸಿರುವಂತೆ ಕಾಲೇಜುಗಳು ನ್ಯಾಕ್ ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯ ಮಾನ್ಯತೆಯನ್ನು ಹೊಂದಿರುವುದು ಅತ್ಯವಶ್ಯಕವಾಗಿರುತ್ತದೆ.

**ಶಾಶ್ವತ ಸಂಯೋಜನೆ ನವೀಕರಣ:** ಶಾಶ್ವತ ಸಂಯೋಜನೆಯ ಅವಧಿಯು ಪೂರ್ಣಗೊಂಡಿರುವಂತಹ ಕಾಲೇಜುಗಳು ಶಾಶ್ವತ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನಾ ನವೀಕರಣಕ್ಕೆ ಕಾಲೇಜುಗಳು ಶಾಶ್ವತ ಸಂಯೋಜನೆಗೆ ಒಳಪಡದ ಕೋರ್ಸ್/ವಿಷಯಗಳ ಸಂಯೋಜನಾ ನವೀಕರಣಕ್ಕೂ ಸಹ ನಿಗಧಿತ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

**ಸರ್ಕಾರದ ಸುತ್ತೋಲೆ ಸಂಖ್ಯೆ:** ಇಡಿ 227 ಯುಅರ್‌ಸಿ 2017, ದಿನಾಂಕ 01-07-2017ರಲ್ಲಿ ನ್ಯಾಕ್ ಸಂಸ್ಥೆಯಿಂದ ಎ, ಬಿ, ಸಿ, ದರ್ಜೆಗಳನ್ನು ಪಡೆದಿರುವಂತಹ ಕಾಲೇಜುಗಳಿಗೆ ಅನುಕ್ರಮವಾಗಿ 5 ವರ್ಷ, 4 ವರ್ಷ ಮತ್ತು 3 ವರ್ಷಗಳ ಅವಧಿಯನ್ನು ಶಾಶ್ವತ ಸಂಯೋಜನೆಗೆ ನಿಗಧಿಪಡಿಸಲಾಗಿದೆ. ಅವಧಿ ನಂತರ ನವೀಕರಣಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

**6. ಸ್ಥಳಾಂತರ/ ಹೆಸರು ಬದಲಾವಣೆ/ ಆಡಳಿತ ಬದಲಾವಣೆ ಇತ್ಯಾದಿ:**

ಕಾಲೇಜುಗಳ ಸ್ಥಳಾಂತರ/ಹೆಸರು ಬದಲಾವಣೆ / ಆಡಳಿತ ಬದಲಾವಣೆ ಇತ್ಯಾದಿಗಳನ್ನು ಕೆ.ಎಸ್.ಯು ಅಧಿನಿಯಮ 2000ದ ಪ್ರಕರಣ 59(5) ರ ಅಡಿಯಲ್ಲಿ ಪರಿಗಣಿಸಲಾಗುವುದು. ಕಾಲೇಜುಗಳು ಈ ಬಗ್ಗೆ ಪ್ರತ್ಯೇಕ ಅರ್ಜಿಯನ್ನು, ಅ) ಆಡಳಿತ ಮಂಡಳಿಯ / ಟ್ರಸ್ಟ್ ನಿರ್ಣಯ, ಆ) ಕಟ್ಟಡದ ನಕ್ಷೆ/ಸುರಕ್ಷತೆ/ಸಂರಚನೆ ಸ್ಥಿರತೆ/ ಕ್ರಯ/ಬೋಗ್ಯದ ಪತ್ರ, ಇ) ಇತರೇ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಈ) ಅಗ್ನಿ ಸುರಕ್ಷಿತ ಪ್ರಮಾಣ ಪತ್ರ ಇತ್ಯಾದಿ ಅವಶ್ಯಕ ದಾಖಲೆಗಳೊಂದಿಗೆ ನಿಗಧಿತ ಶುಲ್ಕ ಪಾವತಿಸಿ ಸಲ್ಲಿಸತಕ್ಕದ್ದು. ಈ ರೀತಿಯ ಸ್ಥಳಾಂತರಕ್ಕೂ ಸಹ ಸರ್ಕಾರ ನಿಗಧಿಪಡಿಸಿದಂತ ಕ್ರ.ಸ (2) ರಲ್ಲಿ ಸೂಚಿಸಿದಂತೆ ಸ್ಥಳಾವಕಾಶ ಹೊಂದಿರುವುದು ಕಡ್ಡಾಯವಾಗಿರುತ್ತದೆ. ಈ ಕುರಿತು ಭೂದಾಖಲೆಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಬೇಕು.

ಸೂಚನೆ: ಕಾಲೇಜು/ಆಡಳಿತ ಮಂಡಳಿಗಳು ಸ್ಥಳಾಂತರ/ಹೆಸರು ಬದಲಾವಣೆ/ಆಡಳಿತ ಬದಲಾವಣೆ ಇತ್ಯಾದಿಗಳ ಬಗ್ಗೆ ಅನುಮತಿಯು ಸರ್ಕಾರದಿಂದ ಅನುಮೋದನೆ ದೊರೆತ ನಂತರ ಮಾತ್ರ ಸಾಧ್ಯವಾಗುವುದು.

**7 ಅರ್ಜಿ ಶುಲ್ಕ:**

ಅ) ಸಂಯೋಜನಾ ನವೀಕರಣ / ಹೆಚ್ಚುವರಿ / (ಸ್ನಾತಕ/ ಸ್ನಾತಕೋತ್ತರ) ಕೋರ್ಸ್ / ವಿದ್ಯಾರ್ಥಿಪ್ರಮಾಣದ

ಹೆಚ್ಚಳ ಸ್ಥಳಾಂತರ / ಹೆಸರು ಬದಲಾವಣೆ / ಆಡಳಿತ ಬದಲಾವಣೆ ಇತ್ಯಾದಿ / ಕೋರ್ಸ್ ಬಿ.ಇಡಿ. –ರೂ. 2,000/– ಇಂಟಿಗ್ರೇಟೆಡ್ ಕೋರ್ಸ್.

(ಆ) ಹೊಸ ಕಾಲೇಜು ಸಂಯೋಜನೆ / ಶಾಶ್ವತ ಸಂಯೋಜನೆ / – ರೂ. 4,000/– ಶಾಶ್ವತ ಸಂಯೋಜನಾ ನವೀಕರಣ

**8. ಸಂಯೋಜನಾ/ ಅರ್ಜಿಗಳ ಶುಲ್ಕ ಮತ್ತು ಅರ್ಜಿಗಳನ್ನು ಸಲ್ಲಿಸುವಿಕೆ:**

ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ: BCU/Aff/Fee/2022-23 ದಿನಾಂಕ29/4/22ರಲ್ಲಿ ಸಂಯೋಜನಾ ಶುಲ್ಕಗಳನ್ನು ಪ್ರಕಟಿಸಲಾಗಿದ್ದು (ಪ.ಜಾ/ ಪ. ಪಂ/ ಪ್ರವರ್ಗ–1ಕ್ಕೆ ಸೇರಿದ ಆಡಳಿತ ಮಂಡಳಿಗಳಿಗೆ ಸಂಯೋಜನಾ ಶುಲ್ಕಗಳಲ್ಲಿ ಶೇಕಡಾ 50 ರಷ್ಟು ರಿಯಾಯಿತಿ ಇರುತ್ತದೆ.) ಶುಲ್ಕಗಳನ್ನು ವಿತ್ತಾಧಿಕಾರಿಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ ಅವರ ಹೆಸರಲ್ಲಿ ಆನ್‌ಲೈನ್ ಮೂಲಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.

ಎಲ್ಲಾ ರೀತಿಯಿಂದ ಪೂರ್ಣವಾಗಿ ಭರ್ತಿಮಾಡಿದ ಅರ್ಜಿಯ (ಹೆಚ್ಚುವರಿ ಸ್ನಾತಕೋತ್ತರ ಕೋರ್ಸಿಗೆ ಅರ್ಜಿ ಸಲ್ಲಿಸಿದಲ್ಲಿ ಪ್ರಾಥಮಿಕ ವರದಿಯೊಂದಿಗೆ) 3 ಪ್ರತಿಗಳನ್ನು ಅಗತ್ಯ ದಾಖಲಾತಿ ಹಾಗೂ ಆನ್‌ಲೈನ್ ರಶೀದಿಯೊಂದಿಗೆ ಖುದ್ದಾಗಿ ದಿನಾಂಕ:26-05-2022ರ (ಸಂಜೆ 4.00 ಗಂಟೆಯೊಳಗೆ) ಮತ್ತು ರೂ.10,000 (ಹತ್ತು ಸಾವಿರ ರೂ.ಗಳು ಮಾತ್ರ) ದಂಡ ಶುಲ್ಕದೊಂದಿಗೆ ದಿನಾಂಕ:31.05.2022ರೊಳಗೆ (ಸಂಜೆ 4.00 ಗಂಟೆಯೊಳಗೆ) ಕುಲಸಚಿವರ ಕಛೇರಿ, ವಿದ್ಯಾಕಾರ್ಯ ಶಾಖೆ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು–560 001 ಇಲ್ಲಿ ತಪ್ಪದೇ ಸಲ್ಲಿಸತಕ್ಕದ್ದು.

**ಆನ್‌ಲೈನ್‌ನಲ್ಲಿ ಶುಲ್ಕ ಸಂದಾಯ ಮಾಡಬೇಕಾಗಿರುವ ಬ್ಯಾಂಕ್ ಖಾತೆಯ ವಿವರ**

**ಆನ್‌ಲೈನ್/RTGS/NEFT**

**ಬ್ಯಾಂಕ್ ಹೆಸರು: ಬ್ಯಾಂಕ್ ಆಫ್ ಬರೋಡ**

**ಖಾತೆ ಸಂಖ್ಯೆ: 05190100016143**

**IFSC CODE: BARB0BANGAL (The Fifth Character is Zero)**

ಸಂಯೋಜನೆ ಶುಲ್ಕದ ಮೇಲೆ 18% ಜಿ.ಎಸ್.ಟಿ (GST) ಮೊತ್ತವನ್ನು ಸರ್ಕಾರ ಕಡ್ಡಾಯಗೊಳಿಸಿದ ತಕ್ಷಣ ಮಹಾವಿದ್ಯಾಲಯಗಳು ಸಂದಾಯ ಮಾಡತಕ್ಕದ್ದು.

| ಅನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿತ ದಿನಾಂಕಗಳು | | |
|---|---|---|
| 1. | ಅನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | 02.05.2022 |
| 2. | ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 25.05.2022 |
| 3. | ರೂ. 10,000/- ಗಳ ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 31.05.2022 |
| 4. | ಭರ್ತಿ ಮಾಡಿದ ಅನ್‌ಲೈನ್ ಅರ್ಜಿಯ ಮೂರು ಮುದ್ರಿತ (Hard Copy) ಪ್ರತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 04.06.2022 |

**ಸೂಚನೆ:**

(1) ಸಂಯೋಜನಾ ಶುಲ್ಕದ ಮರುಪಾವತಿಯು ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ-ಸಂಸ್ಥೆಗಳ ಪರಿಷ್ಕೃತ ಪರಿನಿಯಮಾವಳಿಗಳ ಪ್ರಕಾರ ಮಾಡಲಾಗುವುದು.

(2) ಮಾನ್ಯತೆ ಇಲ್ಲದ ಕೋರ್ಸು/ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಶುಲ್ಕವನ್ನು ಮರುಪಾವತಿ/ಹೊಂದಾವಣೆ ಮಾಡಿಕೊಳ್ಳಲಾಗುವುದಿಲ್ಲ.

(3) ಕಾಲೇಜುಗಳು, ಸಂಯೋಜನಾ ಅರ್ಜಿಗಳಲ್ಲಿ ತಮ್ಮ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ದಾಖಲೆಯ ಪ್ರತಿಯನ್ನು ಸಲ್ಲಿಸತಕ್ಕದ್ದು.

(4) ಅಂಚೆ/ಕೊರಿಯರ್ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

(5) ಹೆಚ್ಚುವರಿ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 22961016/22131385 ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಆದೇಶಾನುಸಾರ

ಕುಲಸಚಿವರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು - 560 001

ಪ್ರತಿಗಳು:

1. ವಿಶ್ವವಿದ್ಯಾಲಯದ ಸಂಯೋಜಿತ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು
3. ಆಯುಕ್ತರು/ ನಿರ್ದೇಶಕರು/ ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು560 001.
4. ವಿತ್ತಾಧಿಕಾರಿಯವರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು560 001.
5. ಕುಲಪತಿಯವರು/ಕುಲಸಚಿವರು/ಕುಲಸಚಿವರು(ಮೌ)/ವಿತ್ತಾಧಿಕಾರಿಯವರು ಇವರುಗಳ ಆಪ್ತ ಕಾರ್ಯದರ್ಶಿ/ ಸಹಾಯಕರಿಗೆ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು560 001.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 384 ಯುಎನ್ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18.02.2022.

## ಸುತ್ತೋಲೆ

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಯುಜಿಸಿ ರೆಗ್ಯುಲೇಷನ್‌ಗಳಲ್ಲಿ ಆಯಾ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ಜಮೀನಿನ ಅರ್ಹತೆಗಳ ಬಗ್ಗೆ ಕೆಲವು ಬದಲಾವಣೆಗಳು ಅಗತ್ಯವೆಂದು ಪರಿಗಣಿಸಿ, ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳ ಬಗ್ಗೆ ಸರ್ಕಾರದ ಸಹಮತಿಗಾಗಿ ವಿಶ್ವವಿದ್ಯಾಲಯಗಳು ಕಳುಹಿಸುವ ಪ್ರಸ್ತಾವನೆಗಳಲ್ಲಿ ಆಯಾ ಸಂಸ್ಥೆ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನಿನ ಮಿತಿಯನ್ನು ಕೆಳಗಿನಂತೆ ಪರಿಷ್ಕರಿಸಿ, ಸೂಕ್ತ ಮಾನದಂಡಗಳನ್ನು ಅನುಸರಿಸಲು ಸೂಚಿಸಿದೆ.

**ಮಾನದಂಡಗಳು:-**

1. The college/institution shall hold undisputed ownership and possession of land free from any or all encumbrances, measuring.

    a. Not less than 0.5 acres if it is located in mega cities.
    b. 1 acre if it is located in BMRDA, city corporations and district head quarters.
    c. 1.5 acres if it is located in Municipalities or taluk head quarters.
    d. 3 acres if it is any other rural areas.

    Provided that these requirements shall not apply to colleges already affiliated to the university prior to the date of notification of UGC. (Affiliation of colleges by the universities) Regulations 2009 and its amendments in 2012, **only if the existing programmes and intake of students are not altered.**

2. The registered society/trust in justified exceptional cases may be allowed to start the college for the 1st year of the programs in a readily available building, provided the institute should have the required land at the place proposed to establish the college on a permanent basis as per para 1 above.

3. In the bond to be executed by the registered society/trust it shall be mentioned that after the college is affiliated, the same will not be shifted to different location or will not be transferred to a different society, Trust, individual or a group of individuals without the prior approval of the University, provided in the new place proposed for shifting the college, the minimum land required under para 1 above shall be ensured.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿದೆಯೇ ಎಂಬುದಕ್ಕೆ ಕೆಳಕಂಡ ದಾಖಲಾತಿಗಳನ್ನು ಕಳುಹಿಸತಕ್ಕದ್ದು:-

....2

1. ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ಕಾರ್ಪೋರೇಷನ್ ಗಳಿಂದ ಪಡೆದ ಇತ್ತೀಚಿನ ಖಾತಾ ನಕಲು

**ಅಥವಾ**

ಸದರಿ ಜಮೀನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಾಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ.

ಹೊಸ ಕಾಲೇಜುಗಳ ಸ್ಥಾಪನೆ, ಹೊಸ ಕೋರ್ಸುಗಳ ಪ್ರಾರಂಭ, ಪ್ರವೇಶ ಸಂಖ್ಯೆಯ ಹೆಚ್ಚಳ, ಸಂಯೋಜನೆ ಮುಂದುವರಿಕೆ/ನವೀಕರಣ, ಸ್ಥಳ/ಹೆಸರು ಬದಲಾವಣೆ ಇತ್ಯಾದಿಗಳ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂ. ಇಡಿ 29 ಯುಎನ್‌ಇ 2021, ದಿನಾಂಕ:12.02.2021 ಹಾಗೂ 16.02.2021ರ ಆದೇಶಗಳ ಜೊತೆಗೆ ಕಾಲೇಜುಗಳ ಜಮೀನಿನ ವಿಸ್ತೀರ್ಣದ ಕುರಿತಂತೆ ಮೇಲ್ಕಂಡ ಮಾನದಂಡಗಳನ್ನು ಯಥಾವತ್ತಾಗಿ ಪಾಲಿಸುವುದು. ಒಂದು ವೇಳೆ ಈ ಮಾನದಂಡಗಳಲ್ಲಿ ವಿಧಿಸಿದ ಜಮೀನಿನ ವಿಸ್ತೀರ್ಣ ಕನಿಷ್ಠ ಮಿತಿಗಿಂತ ಕಡಿಮೆ ಇದ್ದಲ್ಲಿ, ಅಂತಹ ಪ್ರಸ್ತಾವನೆಯನ್ನು ಅನುಮೋದನೆಗೆ ಶಿಫಾರಸ್ಸು ಮಾಡತಕ್ಕದ್ದಲ್ಲ.

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಗೆ:

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
3. ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಹಣಕಾಸು ಅಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು-2), ಬಹುಮಹಡಿಗಳ ಕಟ್ಟಡ, ಬೆಂಗಳೂರು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಸಂಯೋಜನೆ, ಹೊಸ ಕೋರ್ಸ್ ಪ್ರಾರಂಭ, ಸಂಯೋಜನೆ ಮುಂದುವರಿಕೆ, ಖಾಯಂ ಸಂಯೋಜನೆ ಇತ್ಯಾದಿಗಳ ಬಗ್ಗೆ ಆನ್ ಲೈನ್ ಮುಖಾಂತರ ಕ್ರಮಕೈಗೊಳ್ಳುವ ಬಗ್ಗೆ.

ಓದಲಾಗಿದೆ: 1.ಸರ್ಕಾರದ ಆದೇಶ ಸಂಖ್ಯೆ ಇಡಿ 39 ಇಜಿಒಎ 2015, ದಿ: 18-11-2015.
2.ಸರ್ಕಾರದ ಆದೇಶ ಸಂಖ್ಯೆ ಇಡಿ/34/ಇಜಿಒಎ/2020 (ಭಾಗ-2), ದಿನಾಂಕ: 22.06.2020.

****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಸಂ (1) ದಿನಾಂಕ: 18.11.2015ರ ಆದೇಶದಲ್ಲಿ 2015-16 ನೇ ಸಾಲಿನಿಂದ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳ ಸಂಯೋಜನೆಯನ್ನು ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿರುವ ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸಿರುವ ಏಕರೂಪ ನಮೂನೆಯಲ್ಲಿಯೇ ಪ್ರಸ್ತಾವನೆಗಳನ್ನು ಪಡೆಯಬೇಕು ಹಾಗೂ ಈ ಸಂಬಂಧ ಆಯಾ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಸೂಚಿಸಬೇಕೆಂದು, ಹಾಗೂ ಈ ಸಂಬಂಧ ಎಲ್ಲಾ ವಿಶ್ವವಿದ್ಯಾಲಯಗಳು ತಮ್ಮ login ID & Password ಮೂಲಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ login ID & Password ಸೃಜಿಸಿ, ಆಯಾ ಕಾಲೇಜುಗಳಿಗೆ ಸಂಯೋಜನೆ ಪಡೆಯುವ ಸಲುವಾಗಿ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಭರ್ತಿ ಮಾಡುವಂತೆ ಕಾಲೇಜುಗಳಿಗೆ ಸೂಚಿಸಬೇಕೆಂದು ಮತ್ತು ಈ ತಂತ್ರಾಂಶದಲ್ಲಿ ಅಳವಡಿಸಿರುವ ಮಾಹಿತಿಯನ್ನು ವಿಶ್ವವಿದ್ಯಾಲಯ ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸುವಂತೆ ಹಾಗೂ ಪರಿಶೀಲಿಸಿದ ದಿನದಂದೆ ಸಮಿತಿಯು ತನ್ನ ಶಿಫಾರಸ್ಸನ್ನು ತಂತ್ರಾಂಶದಲ್ಲಿ ಆನ್‌ಲೈನ್ ಮುಖಾಂತರ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ದಿನಾಂಕ: 22.06.2020ರ ಆದೇಶದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಗೆ 2019-20 ನೇ ಸಾಲಿನಲ್ಲಿ ಸಂಯೋಜನಾ ಪ್ರಕ್ರಿಯೆ ಕೈಗೊಂಡು 2020-21 ನೇ ಸಾಲಿನ Opening New Colleges, Extension of existing Affiliation, Continuation of Affiliation, Permanent Affiliation, Change /Addition of Subject, Division of Faculty, Increase of intake, Change of name, Closure & withdrawal of a College, Local Inquiry

-2...

Committee formation and Transfer of Management ಮುಂತಾದ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆ ನೀಡುವಾಗ ಕಡ್ಡಾಯವಾಗಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಮುಖಾಂತರ ಉನ್ನತೀಕರಿಸಿರುವ ಆನ್‌ಲೈನ್ ತಂತ್ರಾಂಶದ ಮುಖಾಂತರವೇ ಅರ್ಜಿಗಳನ್ನು ಆಹ್ವಾನಿಸಲು ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು ಅಳವಡಿಸಿರುವ ಮಾಹಿತಿಗಳನ್ನು ವಿಶ್ವವಿದ್ಯಾಲಯವು ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸಿ, ಶಿಫಾರಸ್ಸನ್ನು ಆನ್‌ಲೈನ್ ಮುಖಾಂತರವೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ಆದೇಶಿಸಲಾಗಿತ್ತು.

ಆದರೆ, ಸಂಯೋಜನಾ ಪ್ರಕ್ರಿಯೆಯಲ್ಲಿ Opening New Colleges, Extension of existing Affiliation, Continuation of Affiliation, Permanent Affiliation, Change /Addition of Subject, Division of Faculty, Increase of intake, Change of name, Closure & withdrawal of a College, Local Inquiry Committee formation and Transfer of Management ಮುಂತಾದ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆ ನೀಡುವಾಗ, ಕಡ್ಡಾಯವಾಗಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಮುಖಾಂತರ ಉನ್ನತೀಕರಿಸಿರುವ ಆನ್‌ಲೈನ್ ತಂತ್ರಾಂಶದ ಮುಖಾಂತರವೇ ಅರ್ಜಿಗಳನ್ನು ಆಹ್ವಾನಿಸಲು ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು ಅಳವಡಿಸುವ ಸಂಬಂಧದಲ್ಲಿ ಕೆಲವು ತೊಡಕುಗಳು ಇರುವುದನ್ನು ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಸರ್ಕಾರದ ಗಮನಕ್ಕೆ ತಂದು, ಇದರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡುವಂತೆ ನೀಡಿದ ಸಲಹೆ ಅನುಸಾರವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 29 ಯುಎನ್‌ಇ 2021, ಬೆಂಗಳೂರು,**

**ದಿನಾಂಕ: 12.02.2021.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21 ಮತ್ತು 2021-22ನೇ ಸಾಲುಗಳಿಗೆ Opening New Colleges, Extension of existing Affiliation, Continuation of Affiliation, Permanent Affiliation, Change /Addition of Subject, Division of Faculty, Increase of intake, Change of name, Closure & withdrawal of a College, Local Inquiry Committee formation and Transfer of Management ವಿವಿಧ ರೀತಿಯ ಸಂಯೋಜನೆ ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕ ಸಲ್ಲಿಸುವಾಗ, ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಪಾಲಿಸುವಂತೆ ಆದೇಶಿಸಿದೆ.

1. 2020-21ನೇ ಸಾಲಿಗೆ ಈಗ ಇರುವ ಕೋರ್ಸ್ ಗಳು ಮತ್ತು ವಿದ್ಯಾರ್ಥಿ ಸಂಖ್ಯೆಗಳಿಗೆ ಮಾತ್ರ ಅನ್ವಯಿಸುವಂತೆ ಎಲ್ಲಾ ಸಂಯೋಜನೆಯನ್ನು ನವೀಕರಿಸಲು, ಮುಂದುರಿಸಲು ಮತ್ತು ವಿಸ್ತರಿಸಲು ವಿಶ್ವವಿದ್ಯಾಲಯಗಳು ತಮ್ಮ ಹಂತದಲ್ಲಿಯೇ ನಿಯಾಮಾನುಸಾರ ಕ್ರಮ ಕೈಗೊಳ್ಳುವುದು.

2. 2020-21ನೇ ಸಾಲಿಗೆ, ವಿದ್ಯಾರ್ಥಿ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ, ಹೊಸ ಕಾಂಬಿನೇಷನ್ ಗಳನ್ನು ನೀಡುವ ಬಗ್ಗೆ ಮತ್ತು ಹೊಸ ಕೋರ್ಸ್ ಗಳನ್ನು ಪ್ರಾರಂಭಿಸುವ ಬಗ್ಗೆ ವಿಶ್ವವಿದ್ಯಾಲಯಗಳು ನಿಯಮಾನುಸಾರ ತಮ್ಮ ಅಭಿಪ್ರಾಯಗಳೊಂದಿಗೆ ಕೂಡಲೇ ಸರ್ಕಾರಕ್ಕೆ ಸ್ಪಷ್ಟವಾದ ಶಿಫಾರಸ್ಸುಗಳನ್ನು ಕಳಿಸುವುದು, ಹಾಗೆ ಶಿಫಾರಸ್ಸು ಮಾಡುವಾಗ ಒಂದು ಬಾರಿಯ ಕ್ರಮವಾಗಿ Affiliation Score ಗಳಲ್ಲಿ ಶೇ. 5 ರಷ್ಟು ರಿಯಾಯಿತಿ ನೀಡುವುದು. ಮತ್ತು ಸಂಯೋಜನೆ ಅಂಕಗಳ ಆಧಾರದ ಮೇಲೆ ಕೆಳಕಂಡಂತೆ ಮಾನದಂಡಗಳನ್ನು ನಿಗಧಿಗೊಳಿಸುವುದು.

| ಕ್ರಮ ಸಂಖ್ಯೆ | ನಿಗಧಿಪಡಿಸಬಹುದಾದ ಸಂಯೋಜನೆಯ ರೀತಿ | ಅವಶ್ಯವಿರುವ ಕನಿಷ್ಠ ಸಂಯೋಜನಾ ಶೇಕಡ ಅಂಕಗಳು (%) (ರಿಯಾಯಿತಿ ನಂತರ) |
|---|---|---|
| 01 | ಹೊಸ ಸಂಯೋಜನೆಗಳು | 35 |
| 02 | ಸಂಯೋಜನೆಗಳ ನವೀಕರಣ/ ಮುಂದುವರಿಕೆ/ ವಿಸ್ತರಣೆ | 40 |
| 03 | ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ | 45 |
| 04 | ಹೊಸ ಕೋರ್ಸ್‌ಗಳ /ಹೊಸ ಕಾಂಬಿನೇಷನ್‌ಗಳ ಮಂಜೂರಾತಿ | 50 |
| 05 | ಹೊಸ ಶಾಶ್ವತ ಸಂಯೋಜನೆಗಳು | 55 |
| 06 | ಶಾಶ್ವತ ಸಂಯೋಜನೆಗಳ ನವೀಕರಣ | 65 |

3. **A Library area per student** ಮತ್ತು **Laboratory area per student** ಗಳಲ್ಲಿ 50% ರಿಯಾಯಿತಿ ನೀಡಬಹುದಾಗಿದೆ.

4. 2020-21ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸುವ ಕಾಲೇಜುಗಳ ಸಂಯೋಜನೆಗೆ ಶಿಫಾರಸ್ಸು ಮಾಡುವಾಗ ಸಂಯೋಜನಾ ಅಂಕಗಳಲ್ಲಿ (Affiliation Marks) ಕನಿಷ್ಠ 40 ಅಂಕಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ನಿಗದಿತ ಮಾನದಂಡಗಳನ್ನು (Defined Parameters) ಪೂರೈಸತಕ್ಕದ್ದು.

5. 2021-22ರ ಸಂಯೋಜನೆಗೆ ಸಂಬಂಧಪಟ್ಟಂತೆ, ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯಗಳು ಸಂಯೋಜನಾ ಪ್ರಕ್ರಿಯೆಯನ್ನು ನಡೆಸಿ, ಶಿಫಾರಸ್ಸುಗಳನ್ನು ಆನ್‌ಲೈನ್ ಮುಖಾಂತರ ಸರ್ಕಾರಕ್ಕೆ ಕಳುಹಿಸುವುದು.

6. ಈ ವಿಚಾರದಲ್ಲಿ ಒಂದು ಬಾರಿಯ ಕ್ರಮವಾಗಿ ಸಂಯೋಜನಾ ಅಂಕ (Affiliation Score) ಗಳಲ್ಲಿ ಶೇ.5 ರಷ್ಟು ಅಂಕಗಳ ರಿಯಾಯಿತಿ ನೀಡಿ, ಮೇಲಿನ 2ನೇ ಕಂಡಿಕೆಯ ಪಟ್ಟಿಯಲ್ಲಿ ನೀಡಿರುವಂತೆ ಸಂಯೋಜನಾ ಅಂಕಗಳ ಆಧಾರದ ಮೇಲೆ ಶಿಫಾರಸ್ಸು ಮಾಡುವುದು.

7. ಈ ಹಿಂದಿನ ವರ್ಷಗಳಲ್ಲಿ ಸಂಯೋಜನೆಯಾಗಿರುವ ಕಾಲೇಜುಗಳು, ಪ್ರಸಕ್ತ ಸಾಲಿನಲ್ಲಿ Defined Parameters ನ 8 ಅಂಶಗಳನ್ನು ಪೂರ್ಣಗೊಳಿಸದೆ ಇದ್ದರೆ, ಮುಂದಿನ 2 ವರ್ಷಗಳಲ್ಲಿ Defined Parameters ಗಳನ್ನು ಪೂರ್ಣಗೊಳಿಸುವ ನಿಬಂಧನೆಗೆ ಒಳಪಡಿಸಿ ಸಂಯೋಜನೆಯನ್ನು ನೀಡಬಹುದು ಹಾಗೂ ಸದರಿ ಕಾಲೇಜುಗಳಿಗೆ ಯಾವುದೇ ಹೊಸ ಕೋರ್ಸ್ / ಕಾಂಬಿನೇಷನ್ ಅನ್ನು ನೀಡತಕ್ಕದ್ದಲ್ಲ.

8. ಸಂಯೋಜನೆ ಪಡೆದ ಕಾಲೇಜುಗಳು ಎರಡು ವರ್ಷದ ನಂತರ ಕನಿಷ್ಠ 40 ಸಂಯೋಜನಾ ಅಂಕಗಳನ್ನು ಗಳಿಸದಿದ್ದಲ್ಲಿ ಮತ್ತು ಭೂಮಿಯೂ ಸೇರಿದಂತೆ Defined Parameters ಗಳನ್ನು ಪೂರ್ಣಗೊಳಿಸದ ಪಕ್ಷದಲ್ಲಿ, ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿಯನ್ನು ನಿಷಿದ್ಧಗೊಳಿಸುವುದು. ಅಂತಹ ಸಂದರ್ಭಗಳಲ್ಲಿ ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿಗಳು, ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಆ ಕಾಲೇಜುಗಳನ್ನು ನಡೆಸಲು ಅವಕಾಶ ಕಲ್ಪಿಸುವುದು. ನಂತರ ಆ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವುದು.

-5...

9. ಎಲ್ಲಾ ವಿದ್ಯಾರ್ಥಿಗಳೂ ಏಕಕಾಲದಲ್ಲಿ ಗ್ರಂಥಾಲಯದಲ್ಲಿ ಇರುವುದಿಲ್ಲವಾದ ಕಾರಣ ಮತ್ತುವಿದ್ಯಾರ್ಥಿಗಳು ಪ್ರಯೋಗಾಲಯಗಳನ್ನು ತಂಡಗಳಲ್ಲಿ ಉಪಯೋಗಿಸುವುದರಿಂದ, ಗ್ರಂಥಾಲಯಗಳಿಗೆ ಮತ್ತು ಪ್ರಯೋಗಾಲಯಗಳಿಗೆ ನಿಗಧಿಪಡಿಸಿದ ಸ್ಥಳಗಳ ವಿಸ್ತೀರ್ಣಗಳಲ್ಲಿ 50% ರಿಯಾಯಿತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೀತಲ್.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1)

ಪ್ರತಿಯನ್ನು:-

1) ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3) ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
4) ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5) ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
6) ಹಣಕಾಸು ಅಧಿಕಾರಿ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
7) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1) ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 29 ಯುಎನ್ಇ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:16.02.2021

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ:ಇಡಿ 29 ಯುಎನ್ಇ 2021, ದಿನಾಂಕ:12.02.2021 ರ ಆದೇಶ ಭಾಗದ ಕ್ರಮ ಸಂಖ್ಯೆ:4 ರಲ್ಲಿನ 3 ನೇ ಸಾಲಿನಲ್ಲಿರುವ "ಸಂಯೋಜನಾ ಅಂಕಗಳಲ್ಲಿ (Affiliation Marks) ಕನಿಷ್ಠ 40 ಅಂಕಗಳನ್ನು" ಎಂಬುದರ ಬದಲಾಗಿ "ಸಂಯೋಜನಾ ಅಂಕಗಳಲ್ಲಿ (Affiliation Marks) ಕನಿಷ್ಠ 35 ಅಂಕಗಳನ್ನು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೀತಲ್ ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1)

ಪ್ರತಿಯನ್ನು:-

1) ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3) ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
4) ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5) ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
6) ಹಣಕಾಸು ಅಧಿಕಾರಿ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1) ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.